ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ     ದಿನಾಂಕ : DATE : 20/3/2020

# ಕ್ರಿಯಾಯೋಜನೆ ಅನುಮೋದನೆ ವಿಳಂಬ ಸಹಿಸಲ್ಲ

ವಿಧಾನ ಪರಿಷತ್: ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಕ್ರಿಯಾಯೋಜನೆ ಸಲ್ಲಿಕೆಯಾದ ಮೂರ್ನಾಲ್ಕು ದಿನಗಳಲ್ಲಿ ಅದಕ್ಕೆ ಅನುಮೋದನೆ ನೀಡಬೇಕು. ಇಲ್ಲವಾದರೆ ಅಂತಹ ಜಿಲ್ಲಾಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಎಚ್ಚರಿಸಿದ್ದಾರೆ.

ಮೇಲ್ಮನೆಯಲ್ಲಿ ಗುರುವಾರ ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್‌ನ ಅಲ್ಲಂ ವೀರಭದ್ರಪ್ಪ ಪ್ರಶ್ನೆಗೆ ಪ್ರತಿಕ್ರಿಯಿಸಿ, 2019ರ ಏಪ್ರಿಲ್ ಅಂತ್ಯಕ್ಕೆ 948.97 ಕೋಟಿ ರೂ.ಜಿಲ್ಲಾಧಿಕಾರಿಗಳ ಖಾತೆಯಲ್ಲಿದ್ದು, ಈ ಪೈಕಿ ಪ್ರತಿ ಶಾಸಕರಿಗೆ 50 ಲಕ್ಷದಂತೆ ಎರಡು ಕಂತುಗಳಲ್ಲಿ ಈವರೆಗೆ 299.67 ಕೋಟಿ ರೂ.ಬಿಡುಗಡೆ ಆಗಿದೆ. ಕೆಲವು ಕಡೆ ಜಿಲ್ಲಾಧಿಕಾರಿಗಳು ಕ್ರಿಯಾಯೋಜನೆಗೆ ಅನುಮೋದನೆ ನೀಡದಿರುವುದು ಗಮನಕ್ಕೆ ಬಂದಿದೆ. ಕ್ರಿಯಾಯೋಜನೆ ಸಲ್ಲಿಕೆಯಾದ ಮೂರ್ನಾಲ್ಕು ದಿನಗಳಲ್ಲಿ ಅನುಮೋದನೆ ನೀಡದಿದ್ದರೆ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.



## ಸಂವಿಧಾನದ ಮೇಲಿನ ಚರ್ಚೆ ಮುಕ್ತಾಯ

ವಿಧಾನ ಪರಿಷತ್: ಸಂವಿಧಾನದ ಮೇಲಿನ ಚರ್ಚೆ ಗುರುವಾರ ಮುಕ್ತಾಯಗೊಂಡಿದೆ. 8 ದಿನಗಳಲ್ಲಿ 36 ಸದಸ್ಯರು ಚರ್ಚೆಯಲ್ಲಿ ಪಾಲ್ಗೊಂಡಿದ್ದು, ಒಟ್ಟು 25.33 ಗಂಟೆಗಳ ಕಾಲ ಚರ್ಚೆ ನಡೆದಿದೆ. ಸಂವಿಧಾನದ ಮೇಲಿನ ಚರ್ಚೆಗೆ ಸರ್ಕಾರದ ಪರವಾಗಿ ಸಭಾನಾಯಕ ಕೋಟಾ ಶ್ರೀನಿವಾಸ ಪೂಜಾರಿ ಉತ್ತರ ನೀಡಿದ ನಂತರ ಸಭಾಪತಿ ಪ್ರತಾಪ ಚಂದ್ರ ಶೆಟ್ಟಿಯವರು ಸಮಾರೋಪ ಭಾಷಣ ಮಾಡಿ, ಚರ್ಚೆಯನ್ನು ಪರಿಸಮಾಪ್ತಿಗೊಳಿಸಿದರು.

# ಭೂ ಸುಧಾರಣೆ ವಿಧೇಯಕ ಅಂಗೀಕಾರ

- ಕಾಂಗ್ರೆಸ್, ಜೆಡಿಎಸ್ ಸದಸ್ಯರಿಂದ ಸಭಾತ್ಯಾಗ
- ಗದ್ದಲದ ನಡುವೆಯೇ ವಿಧೇಯಕ ಅಂಗೀಕಾರ

ವಿಧಾನಸಭೆ: ಕೈಗಾರಿಕಾ ಉದ್ದೇಶಕ್ಕೆ ರೈತರಿಂದ ಭೂಮಿ ಖರೀದಿಸಿ ಉದ್ಯಮ ಸ್ಥಾಪನೆ ಮಾಡಿದವರು ಏಳು ವರ್ಷಗಳ ನಂತರ ನಷ್ಟ ಅಥವಾ ಆರ್ಥಿಕ ಮುಗ್ಗಟ್ಟು ಉಂಟಾದರೆ ಅದೇ ಉದ್ದೇಶಕ್ಕೆ ಮತ್ತೊಬ್ಬ ಉದ್ಯಮಿಗೆ ಮಾರಾಟ ಮಾಡಲು ಅವಕಾಶ ಕಲ್ಪಿಸುವ 'ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ-2020' ಪ್ರತಿಪಕ್ಷ ಕಾಂಗ್ರೆಸ್ ಹಾಗೂ ಜೆಡಿಎಸ್ ವಿರೋಧ, ಸಭಾತ್ಯಾಗದ ನಡುವೆ ಅಂಗೀಕಾರಗೊಂಡಿತು.

ಕಂದಾಯ ಸಚಿವ ಆರ್.ಅಶೋಕ್ ಅವರು ವಿಧೇಯಕ ಮಂಡಿಸಿ ಕೈಗಾರಿಕೆಗಳ ಅಭಿವೃದ್ಧಿ, ಬಂಡವಾಳ ಆಕರ್ಷಣೆ, ಉದ್ಯೋಗಾವಕಾಶ ಕಲ್ಪಿಸುವುದು, ನಷ್ಟಕ್ಕೆ ಉಂಟಾಗುವ ಉದ್ಯಮಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಹಿತಾಸಕ್ತಿ ಕಾಪಾಡುವ ದೃಷ್ಟಿಯಿಂದ ಈ ಕಾಯ್ದೆ ತರಲಾಗಿದೆ. ಇದರಲ್ಲಿ ಯಾವುದೇ ಮಾರಕ ಅಂಶಗಳಿಲ್ಲ ಎಂದು ಪ್ರತಿಪಾದಿಸಿದರು.

ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಇದರ ಬಗ್ಗೆ ಸಮಗ್ರ ಚರ್ಚೆಯಾಗಬೇಕೆಂದು ಪಟ್ಟು ಹಿಡಿದರು. ಈ ಬಗ್ಗೆ ಆಡಳಿತ, ಪ್ರತಿಪಕ್ಷ ಸದಸ್ಯರ ನಡುವೆ ವಾಗ್ವಾದ ನಡೆಯಿತು. ಇದೇ ಸಂದರ್ಭದಲ್ಲಿ ಜಿಂದಾಲ್ ಸಂಸ್ಥೆಗೆ ನೀಡಿರುವ ಜಮೀನು, ಧಾರವಾಡದಲ್ಲಿ ಟಾಟಾ ಸಂಸ್ಥೆಗೆ ನೀಡಿರುವ ಜಮೀನು ಹಾಗೂ ಬಳಕೆ ವಿಚಾರಗಳೂ ಚರ್ಚೆಗೆ ಬಂದವು.

ಅಂತಿಮವಾಗಿ ಸರ್ಕಾರವು ವಿಧೇಯಕ ಸಮರ್ಥನೆ ಮಾಡಿಕೊಂಡಿತು. ಗದ್ದಲದ ನಡುವೆಯೇ ವಿಧೇಯಕ ಅಂಗೀಕಾರಕ್ಕೆ ಸ್ಪೀಕರ್ ಮುಂದಾದಾಗ ಕಾಂಗ್ರೆಸ್, ಜೆಡಿಎಸ್ ಸದಸ್ಯರು ಸಭಾತ್ಯಾಗ ನಡೆಸಿದರು. ವಿಧೇಯಕ ಅಂಗೀಕಾರ ಪಡೆಯಲಾಯಿತು.